1209 ಶ್ರೀ ತುಕಾರಾಮ್ ಇ. (ಸಂಡೂರ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮುಖ್ಯ ವೈದ್ಯಾಧಿಕಾರಿ ಹಾಗೂ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಮುಖ್ಯ ವೈದ್ಯಾಧಿಕಾರಿ ಹಾಗೂ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು; ವಿವರ ನೀಡುವುದು;

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಸಂಡೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಮುಖ್ಯ ವೈದ್ಯಾಧಿಕಾರಿ, ತಜ್ಞರು ಮತ್ತು ವೈದ್ಯಾಧಿಕಾರಿಗಳ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ಇ) ತಜ್ಞ ವೈದ್ಯರ ಸೇವೆಯನ್ನು ಸಮಾಲೋಚನೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಇದಕ್ಕಾಗಿ ಎನ್.ಆರ್.ಹೆಚ್.ಎಂ. ಯೋಜನೆಯಡಿ ರೂ. 25,000 ದಿಂದ ಗರಿಷ್ಠ ರೂ. 50,000 ರವರೆಗೆ ಮಾಸಿಕ ಗೌರವಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 2008–09ನೇ ಸಾಲಿನಲ್ಲಿ 815 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ನೇಮಕಗೊಂಡಿದ್ದು, ಆ ಪೈಕಿ 685 ವೈದ್ಯರು ಕಾರ್ಯ ವರದಿ ಮಾಡಿಕೊಂಡರು. 130 ವೈದ್ಯರು ಕಾರ್ಯ ವರದಿ ಮಾಡಿಕೊಳ್ಳಲಿಲ್ಲ. ಒಟ್ಟಾರೆ 182 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಪ್ರಸ್ತುತ ಖಾಲಿ ಇದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರಶ್ನೆ ಸಂಖ್ಯೆ 1209ಗೆ

ಅನುಬಂಧ–1

ಕ್ರ ಸಂ.	ಆಸ್ಪತ್ರೆ ಹೆಸರು	ಖಾಲಿ ಹುದ್ದೆಯ ಹೆಸರು	ಮಂಜೂರು	ಕಾರ್ಯ ನಿರತ	ಖಾಲಿ	ಷರಾ
1	ಪ್ರಾ.ಆ. ಕೇ. ಬಂಡ್ರಿ, ಸಂಡೂರು ತಾ	ವೈದ್ಯಾಧಿಕಾರಿಗಳು	1	0	1	ಆಯುಷ್ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ
2	ಪ್ರಾ.ಆ. ಕೇ. ಚೋರನೂರು, ಸಂಡೂರು ತಾ	ವೈದ್ಯಾಧಿಕಾರಿಗಳು	3	2	1	
3	ಪ್ರಾ.ಆ. ಕೇ. ಮೆಟ್ರಕಿ, ಸಂಡೂರು ತಾ	ವೈದ್ಯಾಧಿಕಾರಿಗಳು	1	0	1	ಆಯುಷ್ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ
4	ಪ್ರಾ.ಆ. ಕೇ. ತಾರಾನಗರ, ಸಂಡೂರು ತಾ	ವೈದ್ಯಾಧಿಕಾರಿಗಳು	1	1	0	
5	ಪ್ರಾ.ಆ. ಕೇ. ಕುಡಿತಿನಿ, ಬಳ್ಳಾರಿ	ವೈದ್ಯಾಧಿಕಾರಿಗಳು	2	2	0	
6	ಸಮುದಾಯ ಆರೋಗ್ಯ ಕೇಂದ್ರ ತೋರಣಗಲ್ಲು ಸಂಡೂರು ತಾ	ವೈದ್ಯಾಧಿಕಾರಿಗಳು	5	2	3	
7	ಸಾರ್ವಜನಿಕ ಆರೋಗ್ಯ ಕೇಂದ್ರ ಸಂಡೂರು ತಾ	ಮುಖ್ಯ ವೈದ್ಯಾಧಿಕಾರಿಗಳು	1	0	1	

1	2	3	4	5	6	7
		ಹಿರಿಯ ತಜ್ಞ ವೈದ್ಯರು	5	0	5	
		ತಜ್ಞ ವೈದ್ಯರು	6	4	2	
		ದಂತ ವೈದ್ಯರು	2	2	0	
		ಒಟ್ಟು	**27**	**13**	**14**	

1182 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಮಟ್ಟದಲ್ಲಿ ವಿವಿಧ ಬಗೆಯ ಅಂಗವಿಕಲತೆಗಳನ್ನು ಗುರುತಿಸಿ, ಅಂಗವಿಕಲ ಪ್ರಮಾಣ ಪತ್ರಗಳನ್ನು ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ವೈದ್ಯರು ಅಂಗವಿಕಲತನ ಪರಿಶೀಲಿಸಿ, ಗುರುತಿಸುವಾಗ ಅಂಗವಿಕಲತೆಯ ಶೇಕಡವಾರು ನಿಗದಿ ಮಾಡಲು ಸರ್ಕಾರದ ನಿಯಮಾವಳಿ ಅಥವಾ ಮಾರ್ಗಸೂಚಿ ಅಥವಾ ಮಾನದಂಡಗಳೇನಾದರೂ ಇದೆಯೇ ಅಥವಾ ಯಾವ ಮಾನದಂಡ ಅನುಸರಿಸಲು ಸೂಚಿಸಲಾಗಿದೆ;

ಇ) ಹಾಗಿದ್ದಲ್ಲಿ, ಅದರ ವಿವರಗಳೇನು? (ದಾಖಲಾತಿಯೊಂದಿಗೆ ವಿವರಿಸಿ)

ಈ) ನಿಯಮಗಳನ್ನು ಪಾಲಿಸಿ, ಕಾರ್ಯಕ್ರಮದ ಅನುಷ್ಠಾನ ಸಮರ್ಪಕವಾಗಿ ನಡೆಯುತ್ತಿದೆಯೇ? ವಿವರ ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಅಂಗವಿಕಲತೆ ಗುರುತಿಸಿ ಪ್ರಮಾಣ ಪತ್ರಗಳನ್ನು ನೀಡಲು ತಾಲ್ಲೂಕು ಮಟ್ಟದಲ್ಲಿ ಆಡಳಿತ ವೈದ್ಯಾಧಿಕಾರಿರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಸದರಿ ಸಮಿತಿಯಲ್ಲಿ ಸಂಬಂಧಪಟ್ಟ ತಜ್ಞ ವೈದ್ಯರು ಹಾಗೂ ಫಿಜಿಯನ್ ಸದಸ್ಯರಾಗಿರುತ್ತಾರೆ. ಸದರಿ ಸಮಿತಿಯ ಸಂಬಂಧಪಟ್ಟ ರೋಗಿಯನ್ನು ತಪಾಸಣೆ ಮಾಡಿ ಕೇಂದ್ರ ಸರ್ಕಾರವು ನೀಡಿರುವ